ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ : ಆ.ಆ.ಶಾ/ಆರ್.ಟಿ.ಇ473/2015-16 ದಿನಾಂಕ : 27.04.2016

## ಸುತ್ತೋಲೆ

ವಿಷಯ : 2016-17ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯ್ದೆಯಡಿ ಪ್ರವೇಶ ಪ್ರಕ್ರಿಯೆ.

- - -

ದಿನಾಂಕ: 27-04-2016ರಂದು ನಡೆದ ವೀಡಿಯೋ ಕಾನ್ಫರೆನ್ಸ್‌ನಲ್ಲಿ ತಿಳಿಸಿರುವಂತೆ, 2016-17ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯ್ದೆಯಡಿ ಪ್ರವೇಶಕ್ಕಾಗಿ ಆನ್‌ಲೈನ್ ಲಾಟರಿ ಪ್ರಕ್ರಿಯೆಗೆ ಪ್ರಕಟಿಸಲಾದ ತಾತ್ಕಾಲಿಕ ಅರ್ಹತಾ ಪಟ್ಟಿಯಲ್ಲಿ ಪರಿಗಣಿಸಲಾಗದ ಅರ್ಜಿಗಳ ಪುನರ್ ಪರಿಶೀಲನೆಗೆ ಸಂಬಂಧಿಸಿದಂತೆ ಉಪನಿರ್ದೇಶಕರು(ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಧಿಕಾರ ವಿಕೇಂದ್ರೀಕರಿಸಿ ಈ ಕೆಳಕಾಣಿಸಿದ ಸೂಚನೆ ನೀಡಲಾಗಿದೆ.

ಪ್ರತಿ ಆಕ್ಷೇಪಣಾ ಅರ್ಜಿಯನ್ನು ವೈಯಕ್ತಿಕ ಗಮನ ನೀಡಿ ಪರಿಶೀಲಿಸುವುದು.

ಶಿಕ್ಷಣ ಹಕ್ಕು ಕಾಯ್ದೆಯಡಿ ಪ್ರವೇಶ ಕೋರಿ ಆನ್‌ಲೈನ್‌ನಲ್ಲಿ ಸಲ್ಲಿಸಲಾದ ಅರ್ಜಿಗಳನ್ನು ಎಲೆಕ್ಟ್ರಾನಿಕ್ ಮೋಡ್ ಮೂಲಕ ಪರಿಶೀಲಿಸಿ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇದರಲ್ಲಿ ಅತೀ ಸೂಕ್ಷ್ಮವಾಗಿ ಪರಿಶೀಲನೆ ಆಗಿರುವುದರಿಂದ ಕೆಲವು ಅರ್ಜಿಗಳು ತಾಳೆ ಹೊಂದಿರುವುದಿಲ್ಲ. ಆದ್ದರಿಂದ ಸಲ್ಲಿಸಿರುವ ಮಾಹಿತಿ ಸರಿ ಇರುವುದಾಗಿ ಕೆಲವು ಪೋಷಕರು ಆಕ್ಷೇಪಣೆ ಸಲ್ಲಿಸಿರುತ್ತಾರೆ, ಈ ರೀತಿ ಪೋಷಕರಿಂದ ಸ್ವೀಕರಿಸಲಾದ ಆಕ್ಷೇಪಣೆ ಅರ್ಜಿಗಳನ್ನು ಪರಿಶೀಲಿಸಿ ಕೆಳಗಿನಂತೆ ಕ್ರಮ ವಹಿಸಲು ತಿಳಿಸಿದೆ.

1. ಆಧಾರ್ ಅಥವಾ ಮತದಾರರ ಗುರುತಿನ ಚೀಟಿಯಲ್ಲಿನ ವಿಳಾಸ, ಸಂಖ್ಯೆ, ಪಿನ್‌ಕೋಡ್ ಮಾಹಿತಿಯು ಶಿಕ್ಷಣ ಹಕ್ಕು ಕಾಯ್ದೆಯಡಿ ಪ್ರವೇಶ ಕೋರಿ ಪೋಷಕರು ಈಗಾಗಲೇ ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಗೆ ತಾಳೆಯಾದಲ್ಲಿ ಅಂತಹ ಮನವಿಗಳನ್ನು ಪುರಸ್ಕರಿಸುವುದು.

2. ಅದೇ ರೀತಿ ಆದಾಯ ದೃಢೀಕರಣ ಪತ್ರದ ಸಂಖ್ಯೆ ಅಥವಾ ಜಾತಿ ದೃಢೀಕರಣ ಪತ್ರದ ಸಂಖ್ಯೆಯನ್ನು ಪೋಷಕರು ತಪ್ಪಾಗಿ ನಮೂದಿಸಿರುವ 'N' ಅಕ್ಷರದಿಂದ ಪ್ರಾರಂಭವಾಗುವ ಸಂಖ್ಯೆಯ ಬದಲು 'RD' ಅಕ್ಷರದಿಂದ ಪ್ರಾರಂಭವಾಗುವ ಸಂಖ್ಯೆ ತಾಳೆಯಾದರೆ ಪುರಸ್ಕರಿಸುವುದು. ಹಾಗೂ ಸಂಖ್ಯೆಯನ್ನು ತಪ್ಪಾಗಿ ನಮೂದಿಸಿದ್ದಲ್ಲಿ ಸರಿಪಡಿಸುವುದು.

3. ಜಾತಿ ಮತ್ತು ಆದಾಯ ದೃಢೀಕರಣ ಪತ್ರದಲ್ಲಿ ನೀಡಿರುವ ವಿಳಾಸ, ಸಂಖ್ಯೆ ಮತ್ತು ಇತರೆ ವಿವರಗಳು ಪೋಷಕರು ಆನ್‌ಲೈನ್‌ನಲ್ಲಿ ಸಲ್ಲಿಸಿರುವ ಅರ್ಜಿಯೊಂದಿಗೆ ಹೊಂದಾಣಿಕೆ ಆದಲ್ಲಿ ಪುರಸ್ಕರಿಸುವುದು.

4. ಅರ್ಜಿಯಲ್ಲಿ ನಮೂದಿಸಿರುವ ಅಂಶಗಳು ಪೋಷಕರು ಆಕ್ಷೇಪಣೆ ಜೊತೆ ಸಲ್ಲಿಸಿರುವ ದಾಖಲೆಗಳಿಗೆ ತಾಳೆಯಾಗದಿದ್ದಲ್ಲಿ ತಿರಸ್ಕರಿಸುವುದು.

5. ದಾಖಲೆಗಳ ಪರಿಶೀಲನೆ ನಂತರ ತಂತ್ರಾಂಶದಲ್ಲಿ ಅಪ್‌ಡೇಟ್ ಮಾಡಲು ಈ ಕೆಳಕಾಣಿಸಿದ ಕ್ರಮವನ್ನು ಅನುಸರಿಸುವುದು:

6. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅವರ ಆಡಳಿತ ವ್ಯಾಪ್ತಿಯ ಶಾಲೆಗಳ ಮಾಹಿತಿಯನ್ನು ಮಾತ್ರ ಅವರ ಪಾಸ್‌ವರ್ಡ್ ಬಳಸಿ ತಂತ್ರಾಂಶದಲ್ಲಿ ಮಾಹಿತಿಯನ್ನು ಸರಿಪಡಿಸಿ ಅಪ್‌ಡೇಟ್ ಮಾಡುವುದು.

7. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸದರಿ ಅರ್ಜಿಯನ್ನು ಸರ್ಕಾರದ ಆದೇಶದ ಸಂಖ್ಯೆ ಇಡಿ 51 ಪಿಜಿಸಿ 2016 (ಪಿ) ದಿನಾಂಕ: 8-2-2016ರಲ್ಲಿ ನಿಗದಿಪಡಿಸಿದ ಮಾನದಂಡಗಳಿಗೆ ಅನುಗುಣವಾಗಿ ಇದ್ದಲ್ಲಿ ಪುರಸ್ಕರಿಸುವುದು, ಇಲ್ಲದಿದ್ದಲ್ಲಿ ತಿರಸ್ಕರಿಸುವುದು.

ಆನ್‌ಲೈನ್ ಅರ್ಜಿಯ ತಿದ್ದುಪಡಿಗಾಗಿ ಈ ಕೆಳಗಿನ ಕ್ರಮವನ್ನು ಅನುಸರಿಸುವುದು:

1) ಇಲಾಖಾ ವೆಬ್‌ಸೈಟ್ http://schooleducation.kar.nic.in ಭೇಟಿ ನೀಡಿ ಸಂಬಂಧಪಟ್ಟ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಬಳಸಿ ಲಾಗಿನ್ ಆಗುವುದು.
2) ತಿದ್ದುಪಡಿ ಮಾಡಬೇಕಾದ ಅರ್ಜಿ ಸಂಖ್ಯೆ, ಮೊಬೈಲ್ ಸಂಖ್ಯೆ ನಮೂದಿಸಿ ಅರ್ಜಿಯನ್ನು ತೆರೆಯುವುದು
3) ಪರದೆಯ ಮೇಲೆ ಮೂಡುವ ಅರ್ಜಿಯಲ್ಲಿ ತಿದ್ದುಪಡಿ ಮಾಡಬೇಕಾದ ಮಾಹಿತಿಯನ್ನು ಸರಿಪಡಿಸುವುದು
4) ಅರ್ಜಿಯಲ್ಲಿ ತಪ್ಪಾಗಿರುವ ಮಾಹಿತಿಯನ್ನು ತಿದ್ದುಪಡಿ ಮಾಡಿದ ನಂತರ ಅಪ್‌ಡೇಟ್ ಮಾಡುವುದು.
5) ಈ ಪ್ರಕ್ರಿಯೆಯನ್ನು ದಿನಾಂಕ:30-04-2016ರ ಸಂಜೆ 5-00 ಗಂಟೆಯೊಳಗಾಗಿ ಪೂರ್ಣಗೊಳಿಸುವುದು.

ಈ ವಿಷಯದಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಗಳು ಉಂಟಾದಲ್ಲಿ **ಶ್ರೀ ಶಿವಕುಮಾರ್, ಪ್ರೋಗ್ರಾಮರ್, ಮೊಬೈಲ್ ಸಂಖ್ಯೆ: 9448999499 ಹಾಗೂ ಶ್ರೀಮತಿ ಅರುಣ, ಪ್ರೋಗ್ರಾಮರ್ ಇವರನ್ನು ಮೊಬೈಲ್ ಸಂಖ್ಯೆ: 9480695470 ಹಾಗೂ ಇತರೇ ವಿಷಯಗಳ ಬಗ್ಗೆ ಶ್ರೀ ಫಾಲಾಕ್ಷಯ್ಯ, ಆರ್.ಟಿ.ಇ ಸಮಾಲೋಚಕರು ಇವರನ್ನು ಮೊಬೈಲ್ ಸಂಖ್ಯೆ: 9449630208** ಮೂಲಕ ಸಂಪರ್ಕಿಸುವುದು.

ಅರ್ಜಿಗಳ ಪರಿಶೀಲನೆಯಲ್ಲಿ ಯಾವುದೇ ರೀತಿಯ ಉದಾಸೀನತೆ ಅಥವಾ ಬೇಜವಾಬ್ದಾರಿ ತೋರದೆ ಬಹಳ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಲು ತಿಳಿಸಿದೆ. ಒಂದು ವೇಳೆ ಅನರ್ಹವಾದ ಅರ್ಜಿಗಳನ್ನು ಸಹ ಪುರಸ್ಕರಿಸಿದಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ನೇರ ಜವಾಬ್ದಾರರಾಗಿರುತ್ತಾರೆ.

(ವಿ. ಪೊನ್ನುರಾಜ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಗೆ,

ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ
ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ